**2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

# ಓ.ಎಸ್.117/2024

**ಪಿ.ಡಬ್ಲ್ಯೂ - 1**

**ಪ್ರಮಾಣೀಕರಿಸಿದ ದಿನಾಂಕ:08.01.2026**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಎ.ಎಸ್ ವಕೀಲರಿಂದ : -**

1. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ನಾನು ಓ.ಎಸ್.198/2023 ದಾವೆಯನ್ನು ಹೊಸಕೋಟೆಯ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಇದೇ ಪ್ರತಿವಾದಿಯ ವಿರುದ್ದ ಹೂಡಿರುತ್ತೇನೆ. ಸದರಿ ದಾವೆಯನ್ನು ನನ್ನ ಜಮೀನಿಗೆ ಓಡಾಡಲು ಮುಳ್ಳುತಂತಿಯನ್ನು ಹಾಕಿ ತೊಂದರೆ ಕೊಟ್ಟಿದ್ದರು, ಆದ್ದರಿಂದ ದಾವೆಯನ್ನು ಹೂಡಿರುತ್ತೇನೆ. ದಾರಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ಸದರಿ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಪ್ರತಿವಾದಿ ಪದೇ ಪದೇ ತೊಂದರೆ ಕೊಡುತ್ತಿರುವ ಕಾರಣ ಈ ದಾವೆಯನ್ನು ಕೂಡ ಹೂಡಿರುತ್ತೇನೆ. ಮುಳ್ಳುತಂತಿಯನ್ನು ಹಾಕಿ ಮನೆಗೆ ಹೋಗಲು ಪ್ರತಿವಾದಿ ಬಿಡದ ಕಾರಣ ಈ ದಾವೆಯನ್ನು ಹೂಡಿರುತ್ತೇನೆ. ಪ್ರತಿವಾದಿ ತೊಂದರೆ ಕೊಟ್ಟಿರುತ್ತಾರೆ, ಆದರೆ ಯಾವ ದಿನಾಂಕದಂದು ತೊಂದರೆ ಕೊಟ್ಟಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ಪ್ರತಿವಾದಿ ನನಗೆ ಯಾವುದೇ ತೊಂದರೆ ಕೊಟ್ಟಿರುವುದಿಲ್ಲ ಮತ್ತು ಪ್ರತಿವಾದಿಗಳ ಜಮೀನಿನ್ನು ಕಬಳಿಸುವ ಉದ್ದೇಶದಿಂದ ಈ ದಾವೆಯನ್ನು ಹೂಡಿರುತ್ತೀರಾ ಎಂದರೆ ಸರಿಯಲ್ಲ.

2. ಓ.ಎಸ್.198/2023 ದಾವೆಯಲ್ಲಿ ಪ್ರತಿವಾದಿಗಳು ದಾರಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ಮಧ್ಯಂತರ ಅರ್ಜಿಯನ್ನು ಹಾಕಿರುತ್ತೇನೆ ಎಂದರೆ ಸರಿ. ಸದರಿ ಮಧ್ಯಂತರ ಅರ್ಜಿ ದಿ:25.09.2023 ರಂದು ವಜಾ ಆಗಿರುತ್ತದೆ ಎಂದರೆ ಸಾಕ್ಷಿಯು ಕೆಳಗಿನ ನ್ಯಾಯಾಲಯಕ್ಕೆ ಹೋಗಿ ಎಂದು ವಜಾ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಮಧ್ಯಂತರ ಆದೇಶದ ಮೇಲೆ ಎಂ.ಎ.32/2023 ರಲ್ಲಿ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಮೇಲ್ಮನವಿ ಹೂಡಿದ್ದೇವೆ ಎಂದರೆ ಸರಿ. ಸದರಿ ಮೇಲ್ಮನವಿ ದಿ:18.04.2024 ರಂದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿ ವಜಾ ಆಗಿದ್ದರೂ ಕೂಡ ವಜಾ ಆಗಿರುವುದಿಲ್ಲ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ. ಎಲ್ಲಾ

ವಿಷಯಗಳನ್ನು ಮರೆಮಾಚಿ, ಮತ್ತೆ ವಾಜ್ಯ ಕಾರಣವನ್ನು ಸೃಷ್ಟಿಸಿಕೊಂಡು ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿರುತ್ತಿರಾ ಎಂದರೆ ಸರಿಯಲ್ಲ.

3. 2 ನೇ ಹಿರಿಯ ಶ್ರೇಣಿ ನ್ಯಾಯಾಲಯ, ಬೆಂಗಳೂರಿನಲ್ಲಿ ಓ.ಎಸ್.737/1996 ರಂತೆ ಪ್ರತಿವಾದಿಗಳು ಮತ್ತು ಇತರರ ವಿರುದ್ದ ದಾವೆಯನ್ನು ಹೂಡಿರುತ್ತಿರಾ ಎಂದರೆ ಸರಿ. ಸದರಿ ದಾವೆಯ ಸಂಪೂರ್ಣ ಮಾಹಿತಿ ನನಗೆ ಇರುತ್ತದೆ. ಸದರಿ ದಾವೆಯನ್ನು ನಾವು ರಾಜಿ ಮಾಡಿಕೊಂಡು ಬಗೆ ಹರಿಸಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ರಾಜಿ ಪ್ರಕಾರ ದಾವಾ ಷೆಡ್ಯೂಲ್ ಸ್ವತ್ತು ನನಗೆ ಬಂದಿರುತ್ತದೆ ಎಂದರೆ ಸರಿ. ರಾಜಿ ಡಿಕ್ರಿಯ ಪ್ರಕಾರ ಷೆಡ್ಯೂಲ್ ಸ್ವತ್ತಿನ ಚಕ್ಕುಬಂದಿ ಪೂ- ನಮ್ಮ ದೊಡ್ಡಪ್ಪನವರವಾದ ಚೌಡಪ್ಪನವರ ಜಮೀನು, ಪ – 10 ಅಡಿ ರಸ್ತೆ, ಉ - ಚೌಡಪ್ಪರವರ ಮೊಮ್ಮಗನ ಮನೆ, ದ - ನಮ್ಮ ದೊಡ್ಡಪ್ಪನವರಾದ ಚೌಡಪ್ಪನವರ ಜಮೀನು ಇರುತ್ತದೆ. ನಾನು ರಾಜಿ ಡಿಕ್ರಿ ಪ್ರಕಾರ ಬಂದಂತಹ ಚಕ್ಕುಬಂದಿಯನ್ನು ಹೇಳಿರುವುದಿಲ್ಲ ಮತ್ತು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾಜಿ ಡಿಕ್ರಿಯ ಪ್ರಕಾರ ಪೂ - ಪ್ರತಿವಾದಿಗಳ ಜಮೀನು ಇರುತ್ತದೆ ಎಂದರೆ ಸರಿ. ಪ – ಪ್ರತಿವಾದಿಗಳ ಉಳಿಕೆ ಜಮೀನು ಎಂದರೆ ಸರಿ, ಸಾಕ್ಷಿ ಮುಂದುವರೆದು, ಮೊದಲು ಮಣ್ಣಿನ ರಸ್ತೆ ಇತ್ತು, ಈಗ ಕಾಂಕ್ರಿಟ್ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ಉ - ಪ್ರತಿವಾದಿಗಳ ಜಮೀನು ಇರುತ್ತದೆ ಎಂದರೆ ಸರಿ.

4. ಓ.ಎಸ್.198/2023 ದಾವೆಯ ಅಂಶಗಳನ್ನು ತಿರುಚಿ ಮತ್ತೆ ಹೊಸ ವ್ಯಾಜ್ಯ ಕಾರಣವನ್ನು ಸೃಷ್ಟಿಸಿ ಈ ಸುಳ್ಳು ದಾವೆಯನ್ನು ಹೂಡಿರುತ್ತಿರಾ ಎಂದರೆ ಸರಿಯಲ್ಲ. ಓ.ಎಸ್.737/1996 ರ ಡಿಕ್ರಿ ಪ್ರಕಾರ ದಾವಾ ಸ್ವತ್ತಿನ ಪಶ್ಚಿಮಕ್ಕೆ 3 ರಿಂದ 4 ಗುಂಟೆ ಜಮೀನು ಯಾರಿಗೆ ಸೇರಬೇಕು ಎಂದರೆ ಸಾಕ್ಷಿಯು ಸದರಿ ಜಾಗದಲ್ಲಿ ರಸ್ತೆ ಇರುತ್ತದೆ, ಯಾರಿಗೆ ಸೇರಬೇಕು ಎಂದು ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**